ದೇವಾಲಯದ ಜೀರ್ಣೋದ್ಧಾರ ಅಭಿವೃದ್ಧಿಗೆ ಬಿಡುಗಡೆಯಾದ ಅನುದಾನ.

2328(2876) ಶ್ರೀ ಸಿ. ಚೆನ್ನಿಗಪ್ಪ(ಕೊರಟಗೆರೆ) :— ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ದೇವಾಲಯಗಳಿಗೆ ಅಭಿವೃದ್ಧಿ ಹಾಗೂ ಜೀರ್ಣೋದ್ಧಾರ ಕಾರ್ಯದ ಸಲುವಾಗಿ ಮುಜರಾಯಿ ಇಲಾಖೆಯಿಂದ ಬಿಡುಗಡೆಯಾದ ಅನುದಾನವೆಷ್ಟು?

2. ಬಿಡುಗಡೆಯಾದ ಅನುದಾನವನ್ನು ಯಾವ ಯಾವ ದೇವಾಲಯಗಳ ಜೀರ್ಣೋದ್ಧಾರ ಕಾರ್ಯಕ್ಕೆ ವಿನಿಯೋಗಿಸಲಾಗಿದೆ? (ವಿವರ ನೀಡುವುದು)

3. ಇನ್ನೂ ಶಿಥಿಲಾವಸ್ಥೆಯಲ್ಲಿರುವ ದೇವಾಲಯಗಳಿಗೆ ಅನುದಾನ ಬಿಡುಗಡೆ ಮಾಡಿ ಅವುಗಳನ್ನು ದುರಸ್ಥಿಗೊಳಿಸಲಾಗುವುದೆ?

ಶ್ರೀ ಬಾಬುರಾವ್ ಚಿಂಚನಸೂರು (ಮುಜರಾಯಿ ಸಚಿವರು) :—

1. 2000-2001ನೇ ಸಾಲಿನಲ್ಲಿ ತುಮಕೂರು ಜಿಲ್ಲೆಗೆ ದೇವಾಲಯಗಳ ದುರಸ್ಥಿ/ ಜೀರ್ಣೋದ್ಧಾರ ರೂ.5,45,000-00ಗಳು ಹಾಗೂ ನಿರ್ಮಾಣಕ್ಕೆ ರೂ.4,90,000-00 ಗಳನ್ನು ಬಿಡುಗಡೆ ಮಾಡಲಾಗಿದೆ. ಸದರಿ ಸಾಲಿನಲ್ಲಿ ಕೊರಟಗೆರೆ ತಾಲ್ಲೂಕಿಗೆ ಹಣ ಬಿಡುಗಡೆಯಾಗಿರುವುದಿಲ್ಲ.

2. 2000-2001ನೇ ಸಾಲಿನ ಆರ್ಥಿಕ ವರ್ಷದ ಅಂತ್ಯದಲ್ಲಿ ಅನುದಾನ ಬಿಡುಗಡೆ ಮಾಡುವುದರಿಂದ ಸಂಬಂಧಿಸಿದ ಸಂಸ್ಥೆಗಳು ಸೂಕ್ತ ದಾಖಲಾತಿಗಳನ್ನು ಒದಗಿಸಿ ಹಣ ಬಿಡುಗಡೆ ಮಾಡಿಸಿಕೊಳ್ಳಬೇಕಾಗುತ್ತದೆ. ಅದರಿಂದಾಗಿ ಈ ಹಂತದಲ್ಲಿ ವಿನಿಯೋಗದ ವಿವರ ಲಭ್ಯವಿರುವುದಿಲ್ಲ.

3. ಸ್ಥಳೀಯ ಭಕ್ತಾದಿಗಳು ಮತ್ತು ಸಾರ್ವಜನಿಕರು ಮುಂದೆ ಬಂದು ನಿಯಮಾನುಸಾರ ಪ್ರಸ್ತಾವನೆ ಸರ್ಕಾರಕ್ಕೆ ಸಲ್ಲಿಸಿದಲ್ಲಿ ಪರಿಶೀಲಿಸಲಾಗುವುದು.

ಬೆಂಗಳೂರು ನಗರದಲ್ಲಿ ನೀರಿನ ದರ ಹೆಚ್ಚಿಸುತ್ತಿರುವುದನ್ನು ಕೈಬಿಡುವುದು.

2329(2877) ಶ್ರೀ ಚೆನ್ನಿಗಪ್ಪ ಸಿ. (ಕೊರಟಗೆರೆ) :— ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಬೃಹದಾಕಾರವಾಗಿ ಬೆಳೆಯುತ್ತಿರುವ ಬೆಂಗಳೂರು ನಗರದ ಯಾವ ಯಾವ ಪ್ರದೇಶಗಳಲ್ಲಿ ನೀರಿನ ಕೊರತೆಯು ಅಧಿಕ ಪ್ರಮಾಣದಲ್ಲಿರುತ್ತದೆ (ವಿವರ ನೀಡುವುದು)

ಇಲ್ಲಿನ ನಾಗರೀಕರು ನೀರಿನ ಸಮಸ್ಯೆಯನ್ನು ಕುರಿತು ಸರ್ಕಾರಕ್ಕೆ ಹೋರಾಟದ ಮೂಲಕ ಮನವಿ ಮಾಡಿಕೊಂಡಿದ್ದರೂ ಸರ್ಕಾರ ಯಾವುದೇ ಕ್ರಮ ಜರುಗಿಸದೇ ಇರುವುದು ನಿಜವೇ?

2. ನೀರಿನ ಕೊರತೆಯಿಂದ ದಿನೇ ದಿನೇ ತೊಂದರೆ ಪಡುತ್ತಿರುವ ನಾಗರೀಕರ ಮೇಲೆ ಸರ್ಕಾರವು ಗದಾ ಪ್ರಯೋಗದಂತೆ ನೀರಿನ ದರವನ್ನು ಹೆಚ್ಚಿಸಲು ನಿರ್ಣಯ ಕೈಗೊಂಡಿರುವುದು ನಿಜವೇ?

3. ಬಡವನ ನೀರಿನ ಬವಣೆಯನ್ನು ತಪ್ಪಿಸಲು ಸರ್ಕಾರ ಈ ರೀತಿ ನೀರಿನ ದರವನ್ನು ಏಕಾಏಕಿ ಹೆಚ್ಚಿಸುತ್ತಿರುವುದು ಸಮಂಜಸವೇ?

4. ಕುಡಿಯುವ ನೀರಿನ ಬವಣೆ ಪಡುತ್ತಿರುವ ಈ ಮಹಾನ್ ನಗರದಲ್ಲಿ ನೀರಿನ ದರವನ್ನು ಹೆಚ್ಚಿಸುವ ಕ್ರಮವನ್ನು ಕೈಬಿಟ್ಟು ಜಲ ಮಂಡಲಿಯಲ್ಲಿಯೇ ಕೋಟ್ಯಾಂತರ ರೂ. ಸೋರಿಕೆಯಾಗುತ್ತಿರುವುದನ್ನು ತಪ್ಪಿಸಿ ಬಡ ನಾಗರೀಕರಿಗೆ ಅನುಕೂಲ ಮಾಡಿಕೊಡುವುದು ಯಾವಾಗ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು) :—

1. ಬೆಂಗಳೂರು ನಗರದ ಸಂಜಯನಗರ, ಆರ್.ಜಿ.ನಗರ ಯಲಹಂಕ, ಹಾಕ್ಸ್‌ಟೌನ್, ಮಾಗಡಿ ರಸ್ತೆ, ಕೆಂಗೇರಿ ಬಾಣಸವಾಡಿ, ಜೀವನ ಭೀಮಾನಗರ, ಕೋಡಿಹಳ್ಳಿ, ದೊಮ್ಮಲೂರು ಪ್ರದೇಶ ಹಾಗೂ ನಗರಪಾಲಿಕೆಗೆ ಹೊಸದಾಗಿ ಸೇರಿಸಲ್ಪಟ್ಟ ಪ್ರದೇಶಗಳಲ್ಲಿ ನೀರಿನ ಕೊರತೆಯಿದೆ. ಕೊರತೆ ನಿವಾರಿಸಲು ಜಲ ಮಂಡಳಿ ಯೋಜಿತ ಕಾರ್ಯಕ್ರಮಗಳನ್ನು ಕೈಗೊಂಡಿದೆ.

ಬೆಂಗಳೂರು ಜಲ ಮಂಡಲಿಯು ಜಪಾನಿನ ಅಂತರರಾಷ್ಟ್ರೀಯ ಸಹಕಾರಿ ಬ್ಯಾಂಕಿನ ಆರ್ಥಿಕ ನೆರವಿನೊಂದಿಗೆ ಸುಮಾರು 1100 ಕೋಟಿ ರೂ. ಗಳ ಕಾವೇರಿ ನೀರು ಸರಬರಾಜು 4ನೇ ಘಟ್ಟ 1ನೇ ಹಂತದ ಯೋಜನೆಯನ್ನು ಕೈಗೆತ್ತಿಕೊಂಡಿದ್ದು ಕಾಮಗಾರಿಗಳು ಭರದಿಂದ ಸಾಗುತ್ತಿದ್ದು, 2002ರ ಮಾರ್ಚ್ ವೇಳೆಗೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ. ಇದರಿಂದ ದಿನಂ ಪ್ರತಿ 270 ದಶಲಕ್ಷ ಲೀಟರ್ ನೀರು ಸರಬರಾಜಾಗುತ್ತದೆ. ಬೆಂಗಳೂರು ಜಲ ಮಂಡಲಿಯು ನಗರಪಾಲಿಕೆಯ ಆರ್ಥಿಕ ನೆರವಿನೊಂದಿಗೆ 2000-01 ರಲ್ಲಿ 225 ಕೊಳವೆ ಬಾವಿಗಳನ್ನು ಹಾಗೂ 2001-02ರ ಇದುವರೆಗಿನ ಅವಧಿಯವರೆಗೆ 35 ಕೊಳವೆ ಬಾವಿಗಳನ್ನು ಕೊರೆದಿದೆ. ನಗರಕ್ಕೆ ಹೊಸದಾಗಿ ಸೇರಿಸಲ್ಪಟ್ಟ ಪ್ರದೇಶಗಳಲ್ಲಿ ನೀರು ಸರಬರಾಜನ್ನು ಒದಗಿಸಲು ಹಾಗೂ ಅಭಿವೃದ್ಧಿಪಡಿಸಲು ಬೆಂಗಳೂರು ನಗರ ಪಾಲಿಕೆಯಿಂದ ಧನ ಸಹಾಯಪಡೆದು ನೀರಿನ ಮುಖ್ಯ ಕೊಳವೆಗಳು ಮತ್ತು

ವಿತರಣಾ ಕೊಳವೆಗಳನ್ನು ಹಾಕಲು ಸಹ ಬೆಂಗಳೂರು ಜಲ ಮಂಡಲಿಯು ಕ್ರಮಕ್ಕೆಗೊಂಡಿದೆ. ಈ ಕಾಮಗಾರಿಗಳು ಈಗಾಗಲೇ ಪ್ರಾರಂಭವಾಗಿ, ಹಂತಹಂತವಾಗಿ ಪೂರೈಸಲಾಗುವುದು.

2. ನೀರಿನ ದರವನ್ನು ಪರಿಷ್ಕೃತಗೊಳಿಸಲು ಪ್ರಸ್ತಾವನೆಯನ್ನು ಸರ್ಕಾರದ ಮುಂದಿದ್ದು ಇದರ ಬಗ್ಗೆ ಇನ್ನೂ ತೀರ್ಮಾನ ಕೈಗೊಳ್ಳಬೇಕಿದೆ.

3. ಕೆ.ಪಿ.ಟಿ.ಸಿ.ಎಲ್ ವಿದ್ಯುತ್ ದರವನ್ನು ಹೆಚ್ಚಿಸಿರುವುದರಿಂದ ಹಾಗೂ ಹೆಚ್ಚುತ್ತಿರುವ ನಿರ್ವಹಣಾ ವೆಚ್ಚದಿಂದ ಜಲಮಂಡಲಿಯು ನೀರಿನ ದರವನ್ನು ಹೆಚ್ಚುಸುವ ಪ್ರಸ್ತಾವನೆಯನ್ನು ಮಂಡಿಸಿದೆ. ಪ್ರತೀ ತಿಂಗಳು ಮಂಡಲಿಯು ಸುಮಾರು 11.25 ಕೋಟಿ ರೂಪಾಯಿಗಳನ್ನು ವಿದ್ಯುಚ್ಛಕ್ತಿಗಾಗಿಯೇ ವೆಚ್ಚವನ್ನು ಭರಿಸಬೇಕಾಗಿರುವುದರ ಜೊತೆಗೆ ನೀರಿನ ಕೊಳವೆ ಮಾರ್ಗ ಹಾಗೂ ಒಳಚರಂಡಿ ವ್ಯವಸ್ಥೆ, ಇತ್ಯಾದಿಗಳ ನಿರ್ವಹಣೆಗಾಗಿ ಹಣವನ್ನು ವ್ಯಯಮಾಡಬೇಕಾಗಿದೆ. ನಗರಕ್ಕೆ ನೀರನ್ನು ಸಮರ್ಪಕವಾಗಿ ವಿತರಣೆ ಮಾಡುವ ಸಲುವಾಗಿ ನೀರಿನ ದರವನ್ನು ಪರಿಷ್ಕೃತಗೊಳಿಸುವುದು ಅತ್ಯವಶ್ಯಕವಾಗಿದೆ. ಆದರೂ ಪ್ರಸ್ತಾವನೆಯಲ್ಲಿರುವ ಪರಿಷ್ಕೃತ ದರವು ಬಡ ಜನತೆಗೆ ಹೊರೆಯಾಗುವುದಿಲ್ಲ.

4. ಬೆಂಗಳೂರು ಜಲ ಮಂಡಲಿಯು ನೀರಿನ ಸೋರುವಿಕೆಯನ್ನು ಕಡಿಮೆ ಮಾಡಲು ಭೂಮಿಯಡಿಯಲ್ಲಿಯೇ ಮೇಲೆ ಕಾಣಿಸಿಕೊಳ್ಳದೆ ಪೋಲಾಗುವ ನೀರನ್ನು ಕಂಡುಹಿಡಿಯಲು ಈಗಾಗಲೇ ವಾಟರ್ ಆಡಿಟ್ ವಿಭಾಗವನ್ನು ತೆಗೆದು, ನೀರು ಸೋರಿಕೆ ತಡೆಯಲು ಕ್ರಮ ತೆಗೆದುಕೊಂಡಿದೆ. ಆರು ತುರ್ತು ನಿವಾರಣಾ ತಂಡಗಳನ್ನು ನೇಮಿಸಿ ನೀರು ಸೋರುವಿಕೆಯನ್ನು ತಡಮಾಡದೆ ನಿವಾರಿಸಲಾಗುತ್ತಿದೆ. ಹಳೆಯ ಜಲಾಶಯಗಳ ಪುನರ್ ನಿರ್ಮಾಣ ಕಾರ್ಯವನ್ನು ಸಹಾ ಕೈಗೆತ್ತಿಕೊಂಡಿದೆ. ನೀರಿನ ನಷ್ಟವನ್ನು ಕಡಿಮೆ ಮಾಡುವ ಸಲುವಾಗಿ ಈಗಾಗಲೇ ಹಲವಾರು ಕಡೆ ಪದೇ ಪದೇ ಸೋರುವಿಕೆಯ ಹಳೆಯ ನೀರಿನ ಕೊಳವೆಗಳನ್ನು ಬದಲಾಯಿಸಿ ಉಕ್ಕಿನ ಕೊಳವೆಗಳನ್ನು ಹಾಕಲಾಗಿದೆ. ಈ ಕಾರ್ಯವನ್ನು ಇನ್ನೂ ಹಲವು ಕಡೆ ಹಂತ ಹಂತವಾಗಿ ಕೈಗೊಳ್ಳಲಾಗುವುದು. ಕೆಟ್ಟುಹೋಗಿರುವ ಜಲ ಮಾಪನಗಳ ಬದಲಿಗೆ ಹೊಸ ಜಲಮಾಪಕಗಳನ್ನು ಅಳವಡಿಸಲಾಗುತ್ತಿದೆ. ನೀರಿನ ವೆಚ್ಚದ ಹಳೆಯ ಬಾಕಿಯನ್ನು ವಸೂಲಿ ಮಾಡುವ ಸಲುವಾಗಿ ಒಬ್ಬ ತಹಸೀಲ್ದಾರ್ ಶ್ರೇಣಿಯ ಅಧಿಕಾರಿಯನ್ನು ನೇಮಿಸಲಾಗಿದೆ. ಹಲವಾರು ಇಲಾಖೆಗಳಿಂದ ಬಹುದೊಡ್ಡ ಬಾಕಿಯನ್ನು ಸಹಾ ವಸೂಲು ಮಾಡಲಾಗಿದೆ. ಇದಲ್ಲದೆ 46,300 ಅನಧಿಕೃತ ಜಲ ಸಂಪರ್ಕಗಳಲ್ಲಿ 33,000 ಸಂಪರ್ಕಗಳನ್ನು ಸಕ್ರಮಗೊಳಿಸಿ 13,200 ಸಂಪರ್ಕಗಳನ್ನು ಕಡಿದು ಹಾಕಲಾಗಿದೆ.

ಆದರೆ ಇವೆಲ್ಲವುಗಳಿಂದಲೇ ಮಂಡಲಿಯ ವೆಚ್ಚವನ್ನು ಭರಿಸಲು ಅಸಾಧ್ಯವಾಗಿದೆ.